ಕರ್ನಾಟಕ ಸರ್ಕಾರ

ಸಮಗ್ರ ಮಕ್ಕಳ ರಕ್ಷಣಾ ಯೋಜನೆ

ಸಂ.ಕೆಎಸ್ಐಸಿಪಿಎಸ್/ಕೋವಿಡ್-19/59/2020-21

ನಿರ್ದೇಶನಾಲಯ
ಸಮಗ್ರ ಮಕ್ಕಳ ರಕ್ಷಣಾ ಯೋಜನೆ,
ಬೆಂಗಳೂರು, ದಿನಾಂಕ:28.04.2020

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು
ಜಿಲ್ಲಾ ಮಕ್ಕಳ ರಕ್ಷಣಾ ಘಟಕ,
30 ಜಿಲ್ಲೆಗಳು.

ಮಾನ್ಯರೇ,

ವಿಷಯ: ಕೋವಿಡ್-19ರ ಹಿನ್ನೆಲೆಯಲ್ಲಿ ಹೊಸದಾಗಿ ರೆಸ್ಕ್ಯೂ ಮಾಡಲಾದ ಮಕ್ಕಳಿಗೆ ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ 2015ರ ಅಡಿಯಲ್ಲಿ ಸೂಕ್ತ ಪುನರ್ವಸತಿ ಕಲ್ಪಿಸುವ ಬಗ್ಗೆ.

ಉಲ್ಲೇಖ: ಈ ಕಛೇರಿಯ ಪತ್ರ ಸಂ.ಕೆಎಸ್ಐಸಿಪಿಎಸ್/ಕೋವಿಡ್-19 53/2020-21 ದಿನಾಂಕ:25.04.2020

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಕೋವಿಡ್-19 ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮವಾಗಿ ಕ್ವಾರಂಟೈನ್‌ನಲ್ಲಿ ಇಡಲು ಅನುಕೂಲವಾಗುವಂತೆ ಬಾಲನ್ಯಾಯ(ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ 2015 ರ ಅಡಿಯಲ್ಲಿ ಹೊಸದಾಗಿ ರೆಸ್ಕ್ಯೂ ಮಾಡಲಾದ ಮಕ್ಕಳಿಗೆ ಪುನರ್ವಸತಿ ಕಲ್ಪಿಸುವ ಸಲುವಾಗಿ ಬಾಲಕರಿಗೆ ಮತ್ತು ಬಾಲಕಿಯರಿಗೆ ಪ್ರತ್ಯೇಕ ಕ್ವಾರಂಟೈನ್ ಸೌಲಭ್ಯವನ್ನು ವ್ಯವಸ್ಥೆ ಮಾಡಲು ಉಲ್ಲೇಖಿತ ಪತ್ರದಲ್ಲಿ ಈಗಾಗಲೇ ಸೂಚಿಸಲಾಗಿತ್ತು. ಮುಂದುವರೆದು ಈ ಕುರಿತು ಈ ಕೆಳಕಂಡಂತೆ ಸ್ಪಷ್ಟೀಕರಣ ನೀಡಲಾಗಿದೆ.

ಉಲ್ಲೇಖಿತ ಪತ್ರದ ವಿಷಯದ ಬಗ್ಗೆ ಕೆಲವು ಜಿಲ್ಲೆಗಳಿಂದ ಕೆಲವು ಪರಿಶೀಲನೆಗಳನ್ನು ಸ್ವೀಕರಿಸಲಾಗಿದೆ. ಹಾಗೂ ಕೆಲವು ಜಿಲ್ಲೆಗಳಿಂದ ಕೆಲವು ಸ್ಪಷ್ಟೀಕರಣಗಳನ್ನು ನೀಡಲು ಕೋರಿರುತ್ತಾರೆ. ಈ ಹಿನ್ನೆಲೆಯಲ್ಲಿ ಕೆಳಕಂಡಂತೆ ಸ್ಪಷ್ಟೀಕರಣವನ್ನು ನೀಡಲಾಗುತ್ತಿದೆ.

ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ಮಕ್ಕಳ ಪಾಲನಾ ಸಂಸ್ಥೆ ತುಂಬಾ ವಿಶಾಲವಾಗಿದ್ದು ಅದರಲ್ಲಿಯೇ ಸೌಕರ್ಯಯುತವಾಗಿ ಹೊಸ ದಾಖಲಾತಿ ಮಕ್ಕಳಿಗೆ ಕ್ವಾರಂಟೈನ್ ಆರಾಮವಾಗಿ ಮಾಡಬಹುದು ಎನಿಸಿದಲ್ಲಿ

ಅಥವಾ

ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ಮಕ್ಕಳ ಪಾಲನಾ ಸಂಸ್ಥೆಗೆ ಪ್ರತ್ಯೇಕ ಮಹಡಿಗಳಿದ್ದರೆ ಅದರಲ್ಲಿ ಒಂದು ಮಹಡಿಯನ್ನು ಕ್ವಾರಂಟೈನ್‌ಗಾಗಿ ಕಾಯ್ದಿರಿಸಬಹುದು ಎಂದು ಅಭಿಪ್ರಾಯಿಸಿದಲ್ಲಿ

ಅಥವಾ

ಉಲ್ಲೇಖಿತ ಪತ್ರದಲ್ಲಿ ಈ ಹಿಂದೆ ತಿಳಿಸಲಾದ ಆಪ್ಷನ್‌ಗಳಿಗೆ ಅನುಗುಣವಾಗಿ ವ್ಯವಸ್ಥೆ ಕಲ್ಪಿಸಿಕೊಳ್ಳಬೇಕಾದಲ್ಲಿ

ಮೇಲಿನಂತೆಯೇ ಇರುವ ಆಪ್ಷನ್‌ಗಳಲ್ಲಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಅಧ್ಯಕ್ಷರಾದ ಜಿಲ್ಲಾಧಿಕಾರಿಗಳು ಇವರ ನೇತೃತ್ವದಲ್ಲಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕವು ಹಾಗೂ ಬಾಲನ್ಯಾಯ ಕಾಯ್ದೆ ಹಾಗೂ ನಿಯಮಾವಳಿ ಪ್ರಕಾರ ಮಕ್ಕಳ ಪ್ಲೇಸ್‌ಮೆಂಟ್ ಬಗ್ಗೆ ನಿರ್ಧಾರ ಕೈಗೊಳ್ಳಬೇಕಾದ ಬಾಲನ್ಯಾಯ ಮಂಡಳಿ ಹಾಗೂ ಮಕ್ಕಳ ಕಲ್ಯಾಣ ಸಮಿತಿ ಇವರು ಆಯಾ ಜಿಲ್ಲೆಗಳಲ್ಲಿ

ಜಿಲ್ಲಾ ಮಟ್ಟದಲ್ಲಿ ಕ್ಷೇತ್ರದ ಸಂದರ್ಭ ಹಾಗೂ ಪರಿಸ್ಥಿತಿಗಳಿಗೆ ಅನುಗುಣವಾಗಿ ಸೂಕ್ತ ನಿರ್ಧಾರ ಕೈಗೊಳ್ಳತಕ್ಕದ್ದು.

ಮಕ್ಕಳ ಪಾಲನಾ ಕೇಂದ್ರಗಳಲ್ಲಿ ಈಗಾಗಲೇ ಇರುವ ಮಕ್ಕಳ ಹಿತದೃಷ್ಟಿಯಿಂದ ಹಾಗೂ ಬಾಲನ್ಯಾಯ ಕಾಯ್ದೆಯನುಸಾರ ಆಗಿಂದಾಗ್ಗೆ ರೆಸ್ಕ್ಯೂ ಮಾಡಲಾಗುತ್ತಿರುವ ಹೊಸ ದಾಖಲಾತಿ ಮಕ್ಕಳ ಹಿತದೃಷ್ಟಿಯಿಂದ ಕೇಂದ್ರ ಕಛೇರಿಯಿಂದ ಉಲ್ಲೇಖಿತ ಪತ್ರ ಮತ್ತು ಈ ಪತ್ರದನ್ವಯ ನೀಡಲಾದ ಆಪ್ಷನ್‌ಗಳನ್ನು ಆಪ್ಷನ್‌ಗಳೆಂದು ಮಾತ್ರ ಪರಿಗಣಿಸಿ ಆಯಾ ಜಿಲ್ಲಾ ಮಟ್ಟದ ಪರಿಸ್ಥಿತಿಗಳಿಗೆ ಅನುಗುಣವಾಗಿ ಸೂಕ್ತ ಆಪ್ಷನ್‌ನ್ನು ಜಿಲ್ಲಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಬಾಲನ್ಯಾಯ ಮಂಡಳಿ ಮತ್ತು ಮಕ್ಕಳ ಕಲ್ಯಾಣ ಸಮಿತಿ ಸಮನ್ವಯದೊಂದಿಗೆ ಆಯಾ ಜಿಲ್ಲೆಗಳಲ್ಲಿ ಜಿಲ್ಲಾ ಮಟ್ಟದಲ್ಲಿ ಕ್ಷೇತ್ರದ ಸಂದರ್ಭ ಹಾಗೂ ಪರಿಸ್ಥಿತಿಗಳಿಗೆ ಅನುಗುಣವಾಗಿ ಸೂಕ್ತ ನಿರ್ಧಾರವನ್ನು ಜಿಲ್ಲಾ ಮಟ್ಟದಲ್ಲಿಯೇ ಕೈಗೊಳ್ಳುವುದು.

ಒಂದು ವೇಳೆ ಹೊಸ ದಾಖಲಾತಿ ಮಕ್ಕಳನ್ನು ಕೋವಿಡ್-19 ಸಲುವಾಗಿ ಉಲ್ಲೇಖಿತ ಪತ್ರದಂತೆ ಪ್ರತ್ಯೇಕ ಫಿಟ್ ಫೆಸಿಲಿಟಿ ಸಂಸ್ಥೆಗಳಲ್ಲಿ ಕ್ವಾರಂಟೈನ್/ಪುನರ್ವಸತಿ ವ್ಯವಸ್ಥೆ ಕಲ್ಪಿಸಲು ಜಿಲ್ಲಾ ಮಟ್ಟದಲ್ಲಿ ಬಾಲನ್ಯಾಯ ಮಂಡಳಿ ಅಥವಾ ಮಕ್ಕಳ ಕಲ್ಯಾಣ ಸಮಿತಿ ನಿರ್ಧಾರ ಕೈಗೊಂಡಲ್ಲಿ ಬಾಲನ್ಯಾಯ ಕಾಯ್ದೆ(ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ 2015 ಮತ್ತು ಬಾಲನ್ಯಾಯ ಕಾಯ್ದೆ ನಿಯಮಾವಳಿಗಳ ನಿಯಮ 2016ರ ಪ್ರಕಾರ ಸದರಿ ಪ್ರತ್ಯೇಕ ವ್ಯವಸ್ಥೆ ಬಗ್ಗೆ ನಿಯಮ 27 ರನ್ವಯ ಫಿಟ್ ಫೆಸಿಲಿಟಿ ಎಂದು ನಮೂನೆ 39ರಲ್ಲಿ ಮಕ್ಕಳ ಕಲ್ಯಾಣ ಸಮಿತಿಯಿಂದ ಅಥವಾ ಬಾಲನ್ಯಾಯ ಮಂಡಳಿಯಿಂದ ಸಂದರ್ಭಕ್ಕನುಗುಣವಾಗಿ ಫಿಟ್ ಫೆಸಿಲಿಟಿ ಎಂದು ಗುರುತಿಸಿಕೊಳ್ಳತಕ್ಕದ್ದು ಹಾಗೂ ರೆಸ್ಕ್ಯೂ ಮಾಡಲಾದ ಪ್ರತೀ ಮಗುವಿಗೂ ನಮೂನೆ 18ರ ಪ್ರಕಾರ ಆರ್ಡರ್ ಆಫ್ ಪ್ಲೇಸ್‌ಮೆಂಟ್ ಆದೇಶ ಪಡೆಯತಕ್ಕದ್ದು.

ಸದರಿ ಫಿಟ್ ಫೆಸಿಲಿಟಿ ವ್ಯವಸ್ಥೆಯಲ್ಲಿರುವ ಮಕ್ಕಳ ಹಿತದೃಷ್ಟಿಯಿಂದ ಈ ಕೆಳಕಂಡಂತೆ ಕ್ರಮಕೈಗೊಳ್ಳುವುದು.

1) ಮುಖ್ಯವಾಗಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ವತಿಯಿಂದ ಪಾಳಿಯ ಮೇಲೆ ದಿನನಿತ್ಯ ಬೆಳಗ್ಗೆ ಮತ್ತು ರಾತ್ರಿ ವೇಳೆಯಲ್ಲಿ ಒಬ್ಬೊಬ್ಬರು ಸಿಬ್ಬಂದಿ ಸದರಿ ಸಂಸ್ಥೆಯಲ್ಲಿರುವ ಮಕ್ಕಳಿಗೆ ಎಲ್ಲಾ ಸೌಲಭ್ಯಗಳು ಲಭ್ಯವಾಗುತ್ತಿರುವ ಬಗ್ಗೆ ಮೇಲ್ವಿಚಾರಣೆ ಮಾಡಲು ಸಂಸ್ಥೆಯಲ್ಲಿಯೇ ಇರಲು ಆದೇಶ ಹೊರಡಿಸುವುದು.
2) ಪ್ರತಿ ದಿನ ಒಬ್ಬರು ಕೌನ್ಸಿಲರ್ ಭೇಟಿ ನೀಡಿ ಮಕ್ಕಳಿಗೆ ಸಮಾಲೋಚನೆ ಮಾಡತಕ್ಕದ್ದು.
3) ಜಿಲ್ಲಾಧಿಕಾರಿಗಳ ಸಹಕಾರದಿಂದ ಕಾನ್ಸ್‌ಟೇಬಲ್ ಸೇವೆಯನ್ನು ಪಡೆಯುವುದು. ಹಗಲು ಮತ್ತು ರಾತ್ರಿ ಪಾಳಿಗೆ ಒಬ್ಬೊಬ್ಬರಂತೆ ಕಾನ್ಸ್‌ಟೇಬಲ್ ಅಲ್ಲಿಯೇ ವಾಸ್ತವ್ಯವಿದ್ದು, ಮಕ್ಕಳಿಗೆ ನಿರಂತರ ರಕ್ಷಣೆಯನ್ನು ಒದಗಿಸಲು ವ್ಯವಸ್ಥೆ ಮಾಡುವುದು.
4) ಈ ಮಕ್ಕಳಿಗೆ ವಿವಿಧ ಚಟುವಟಿಕೆಗಳನ್ನು ಏರ್ಪಡಿಸಿ ಒಂಟಿತನದಿಂದ ಬೇಸರವಾಗದಂತೆ ನೋಡಿಕೊಳ್ಳಲು ಕ್ರಮವಹಿಸುವುದು.
5) ಮಕ್ಕಳಿಗೆ ದಿನನಿತ್ಯ ಇನ್ಫ್ರಾರೆಡ್ ಡಿಜಿಟಲ್ ನಾನ್ ಕಾಂಟ್ಯಾಕ್ಟ್ ಥರ್ಮಾಮೀಟರ್‌ರಿಂದ ತಾಪಮಾನವನ್ನು ಪರೀಕ್ಷಿಸುವುದು. ಇದನ್ನು ಮಗುವಾರು ವಹಿಯಲ್ಲಿ ನಿರ್ವಹಿಸುವುದು ಹಾಗೂ ನಿಯಮಿತವಾಗಿ ವೈದ್ಯಕೀಯ ತಪಾಸಣೆ ನಡೆಸುವುದು.

ಬಾಲನ್ಯಾಯ ಕಾಯ್ದೆ ಅಡಿಯಲ್ಲಿ ಹೊಸ ದಾಖಲಾತಿ ಮಕ್ಕಳ ವಿಷಯದಲ್ಲಿ ಶ್ರೀಮತಿ ಸಿಂಧು ನಾಯಕ್, ಕರ್ನಾಟಕ ಸ್ಟೇಟ್ ಕೌನ್ಸಿಲ್ ಫಾರ್ ಚೈಲ್ಡ್ ವೆಲ್‌ಫೇರ್ ಇವರು ಮಕ್ಕಳ ರಕ್ಷಣಾ ಕ್ಷೇತ್ರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಹಲವು ಪರಿಣಿತರ ಸಹಕಾರ ಮತ್ತು ಸಮನ್ವಯದೊಂದಿಗೆ

1. "Advisory for Admission and Placement of Children in Need of Care and Protection and Children in Conflict with Law" and

2. "Checklist for Potential Fit Facilities for COVID-19 Quarantaine Care for CNCP and CICL"

ಇವುಗಳನ್ನು ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ ಮಾರ್ಗದರ್ಶನಗಳ ಅನ್ವಯ ರೂಪಿಸಿದ್ದು ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳಿಗೆ, ಬಾಲನ್ಯಾಯ ಮಂಡಳಿಗಳು ಹಾಗೂ ಮಕ್ಕಳ ಕಲ್ಯಾಣ ಸಮಿತಿಗಳಿಗೆ ಬಹಳ ಉಪಯುಕ್ತವಾಗುವುದರಿಂದ ಅವುಗಳನ್ನು ಗಮನಕ್ಕೆ ಹಾಗೂ ಅವಶ್ಯಕ ಕ್ರಮಕ್ಕಾಗಿ ಈ ಪತ್ರಕ್ಕೆ ಲಗತ್ತಿಸಿದ ಅನುಬಂಧದಲ್ಲಿ ಒದಗಿಸಲಾಗುತ್ತಿದೆ. ಈ ಅಡ್ವೈಜರಿ ಮತ್ತು ಚೆಕ್‌ಲಿಸ್ಟ್‌ಗಳನ್ನು ಇಲಾಖೆಗೆ ಒದಗಿಸಿದ ಸದರಿ ತಜ್ಞರಿಗೆ ಧನ್ಯವಾದಗಳು. ಈ ಅಡ್ವೈಜರಿ ಮತ್ತು ಚೆಕ್‌ಲಿಸ್ಟ್‌ಗಳನ್ನು ನಿಮ್ಮ ಜಿಲ್ಲೆಯ ಬಾಲನ್ಯಾಯ ಮಂಡಳಿ ಹಾಗೂ ಮಕ್ಕಳ ಕಲ್ಯಾಣ ಸಮಿತಿಗಳಿಗೆ ತಲುಪಿಸುವುದು.

**ಕೋವಿಡ್-19ರ ಹಿನ್ನೆಲೆಯಲ್ಲಿ ಕೇಂದ್ರ ಕಛೇರಿಯಿಂದ ನೀಡಲಾಗುತ್ತಿರುವ ಯಾವುದೇ ಮಾರ್ಗದರ್ಶನ ಅಥವಾ ನಿರ್ದೇಶನಗಳನ್ನು ಅನುಪಾಲಿಸುವಾಗ ಬಾಲನ್ಯಾಯ(ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ 2015 ಹಾಗೂ ಬಾಲನ್ಯಾಯ(ಮಕ್ಕಳ ಪಾಲನೆ ಮತ್ತು ರಕ್ಷಣೆ) ನಿಯಮಾವಳಿ 2016ರ ಲೀಗಲ್ ಪ್ರಾವಿಜನ್ಸ್‌ಗಳನ್ನು ಕಡ್ಡಾಯವಾಗಿ ಅನುಪಾಲಿಸತಕ್ಕದ್ದು.**

ತಮ್ಮ ವಿಶ್ವಾಸಿ,

೨೮.೦೪.೨೦೨೦

ನಿರ್ದೇಶಕರು,
ಸಮಗ್ರ ಮಕ್ಕಳ ರಕ್ಷಣಾ ಯೋಜನೆ,
ಬೆಂಗಳೂರು.